# ತೆನಾಲಿ ರಾಮ ವಿಕಟಕವಿ ಆಗಿದ್ದು




■ ವೇದಾವತಿ ಹೆಚ್.ಎಸ್.

ವಿಜಯನಗರ ಸಾಮ್ರಾಜ್ಯವನ್ನು ಕೃಷ್ಣದೇವರಾನು ಆಳುತ್ತಿದ್ದನು. ಅಲ್ಲಿ ತೆನಾಲಿ ಎಂಬ ಗ್ರಾಮವಿತ್ತು. ಆ ಗ್ರಾಮದಲ್ಲಿ ರಾಮನೆಂಬ ಯುವಕನಿದ್ದ. ರಾಮನು ತುಂಬಾ ಸೋಮಾರಿಯಾಗಿದ್ದನು. ತನ್ನ ತಾಯಿಗೆ ಯಾವುದೇ ಸಹಾಯವನ್ನೂ ಮಾಡುತ್ತಿರಲಿಲ್ಲ. ಒಮ್ಮೆ ರಾಮನ ತಾಯಿ 'ರಾಮಾ, ಮನೆಯಲ್ಲಿ ಸೌದೆ ಖಾಲಿಯಾಗಿದೆ. ತೆಗೆದುಕೊಂಡು ಬಾ' ಎಂದಳು. ಆದರೆ ರಾಮನು ತಾಯಿಯ ಮಾತು ಕೇಳಿಸಿಲ್ಲದಂತೆ ನಟನೆಯನ್ನು ಮಾಡಿದ. ಮತ್ತೊಮ್ಮೆ ರಾಮನ ತಾಯಿಯು 'ರಾಮಾ, ತರಕಾರಿಯಾದರೂ ತಂದು ಕೊಡು' ಎಂದು ಕೇಳಲು 'ಹೋಗಮ್ಮಾ, ನನ್ನ ಕೈಯಲ್ಲಿ ಆಗೋಲ್ಲ, ನನಗೆ ತುಂಬಾ ಸುಸ್ತಾಗುತ್ತಿದೆ' ಎಂದು ಕೆಲಸವನ್ನು ಮಾಡಲು ತಪ್ಪಿಸಿಕೊಳ್ಳುತ್ತಿದ್ದ.

ರಾಮನು ಹೀಗೆ ಸೋಮಾರಿಯಾಗಿ ಮನೆಯಲ್ಲಿ ದಿನಗಳನ್ನು ಕಳೆಯುತ್ತಿದ್ದ. ಇದರಿಂದ ಅವನ ತಾಯಿಗೂ ಬೇಸರವಾಗುತ್ತಿತ್ತು. ಹೀಗಿರುವಾಗ ತೆನಾಲಿ ಗ್ರಾಮದಲ್ಲಿ ಒಂದು ವರ್ಷವಾದರೂ ಮಳೆ ಬರಲಿಲ್ಲ. ನದಿ ನೀರಿಲ್ಲದೇ ಒಣಗಿ ಹೋಗಿತ್ತು. ಇದರಿಂದ ಬೆಳೆಗಳನ್ನು ಬೆಳೆಯಲು ಸಾಧ್ಯವಿಲ್ಲದಂತೆ ಆಗಿತ್ತು. ಬೆಳೆದ ಬೆಳೆಗಳು ನೀರಿಲ್ಲದೇ ಒಣಗಿ ಹೋಗಿದ್ದವು. ಒಮ್ಮೆ ತೆನಾಲಿ ಗ್ರಾಮಕ್ಕೆ ಸನ್ಯಾಸಿಯೊಬ್ಬರು ಬಂದರು. ಸನ್ಯಾಸಿ ಆ ಗ್ರಾಮಕ್ಕೆ ಬಂದ ಸಮಯದಲ್ಲಿ ಮಳೆಯು ಜೋರಾಗಿ ಬಂದಿತು. ಆಗ ಅಲ್ಲಿನ ಗ್ರಾಮದ ಜನರು 'ಈ ಸನ್ಯಾಸಿಯು ನಮ್ಮ ಗ್ರಾಮಕ್ಕೆ ಬಂದದ್ದರಿಂದಲೇ ಮಳೆಯು ಬಂದಿದೆ' ಎಂದು ಸಂತಸ ಪಟ್ಟರು. ಆದರೆ ರಾಮನು ಜನರ ಮಾತುಗಳನ್ನು ಹಾಸ್ಯ ಮಾಡಿದನು. ರಾಮನ ಹಾಸ್ಯಕ್ಕೆ ಸನ್ಯಾಸಿಯು ಕೋಪಗೊಳ್ಳಲಿಲ್ಲ. ಬದಲಿಗೆ 'ಈ ಯುವಕನಿಗೆ ಏನನ್ನಾದರೂ ಉಪಯೋಗವಾಗುವುದನ್ನು ತಿಳಿಸಬೇಕು' ಎಂದು ಮನಸ್ಸಿನಲ್ಲಿ ಅಂದುಕೊಂಡನು.

ಸನ್ಯಾಸಿಯು ತನ್ನ ಹತ್ತಿರಕ್ಕೆ ರಾಮನನ್ನು ಕರೆದು 'ನೋಡು ರಾಮ, ನನಗೀಗ ವಯಸ್ಸಾಯಿತು. ನಾನು ಈ ಪ್ರಪಂಚದಲ್ಲಿ ಬಹಳಷ್ಟು ತಿಳಿದುಕೊಂಡಿದ್ದೇನೆ. ಅದನ್ನು ಬೋಧಿಸಲು ನನಗೆ ಸರಿಯಾದ ಶಿಷ್ಯರು ಸಿಗುತ್ತಿಲ್ಲ. ನಾನೀಗ ನಿನಗೊಂದು ಮಂತ್ರವನ್ನು ಹೇಳಿಕೊಡುತ್ತೇನೆ. ನೀನು ಈ ದಿನ ಕಾಳಿಕಾದೇವಿಯ ಆಲಯಕ್ಕೆ ಹೋಗಿ ನಾನು ಹೇಳಿ ಕೊಟ್ಟ ಮಂತ್ರವನ್ನು ಸಾವಿರ ಸಲ ಜಪಿಸು. ಆಗ ದೇವಿಯ ಪ್ರತ್ಯಕ್ಷಳಾಗುತ್ತಾಳೆ. ಅವಳಿಂದ ನಿನಗೆ ಬೇಕಾದ ವರವನ್ನು ಪಡೆದುಕೋ' ಎಂದನು.

ಸನ್ಯಾಸಿಯು ಹೇಳಿಕೊಟ್ಟ ಮಂತ್ರವನ್ನು ರಾಮನು ಬೇಗನೇ ಕಲಿತುಕೊಂಡನು. ರಾಮನಿಗೆ ಒಳ್ಳೆಯ ನೆನೆಪಿನ ಶಕ್ತಿಯಿದ್ದ ಕಾರಣ ಸನ್ಯಾಸಿಯು ಹೇಳಿಕೊಟ್ಟ ಮಂತ್ರವನ್ನು ತಪ್ಪಿಲ್ಲದೇ ಉಚ್ಚರಿಸಿದನು. ಅದೇ ದಿನ ರಾತ್ರಿ ತನ್ನ ತಾಯಿ ಮತ್ತು ಹೆಂಡತಿಯು ಮಲಗಿ ನಿದ್ದೆಗೆ ಜಾರಿದ ಸಮಯವನ್ನು ನೋಡಿ ಕಾಳಿಕಾ ಗುಡಿಗೆ ಹೋದನು. ರಾಮನು ದೇವಿಯ ಮೂರ್ತಿಗೆ ನಮಸ್ಕರಿಸಿ ಸನ್ಯಾಸಿಯು ಹೇಳಿಕೊಟ್ಟ ಮಂತ್ರವನ್ನು ಜಪಿಸತೊಡಗಿದನು. ರಾಮನು ಸಾವಿರ ಸಲ ಮಂತ್ರ ಜಪಿಸಿ ಮುಗಿಸುವಷ್ಟರಲ್ಲೇ ಅವನೆದುರು ಮಹಾಕಾಳಿಯು ಪ್ರತ್ಯಕ್ಷಳಾದಳು. ರಾಮನು ಮಹಾಕಾಳಿಯ ಸಾವಿರ ಮುಖವನ್ನು ನೋಡಿ ಹೆದರಲಿಲ್ಲ. ಆಕೆಯ ಕರಾಳ ಮುಖವನ್ನು ನೋಡಿ ಗಟ್ಟಿಯಾಗಿ ನಗತೊಡಗಿದನು.ಆಗ ಕಾಳಿ ಮಾತೆಯು 'ರಾಮಾ, ಏಕೆ ನಗುತ್ತಿರುವೇ ಹೇಳು?' ಎಂದು ಕೇಳಿದಳು.

ಆಗ ರಾಮನು 'ತಾಯಿ, ದಯವಿಟ್ಟು ನನ್ನನ್ನು ಕ್ಷಮಿಸು. ನಿನ್ನನ್ನು ನೋಡಿ ನನಗೊಂದು ವಿಚಿತ್ರವಾದ ಸಂದೇಹ ಬಂದಿತು. ನನಗಿರುವುದು ಒಂದೇ ಮೂಗು, ಆದರೆ ನನಗೆ ನೆಗಡಿಯಾದರೆ ಅದನ್ನು ಒರೆಸಿಕೊಳ್ಳಲು ಎರಡೂ ಕೈಗಳೂ ಸಾಕಾಗುವುದಿಲ್ಲ. ಹಾಗಿರುವಾಗ ನಿನಗಿರುವುದೂ ಎರಡೇ ಕೈಗಳು! ಆದರೆ ನಿನಗಿರುವ ಸಹಸ್ರ ಮೂಗುಗಳನ್ನು ನಿನ್ನ ಎರಡೇ ಕೈಗಳಿಂದ ಹೇಗೆ ನಿಭಾಯಿಸುತ್ತೀಯೆ? ಅದನ್ನು ನೆನೆಸಿಕೊಂಡು ನಗು ಬಂತು' ಎಂದನು.

ಕಾಳಿ ಮಾತೆಯು 'ಹೌದು, ಇದು ತಮಾಷೆ ವಿಷಯವೇ?' ಎಂದು ನಕ್ಕಳು. ''ರಾಮಾ, ನೀನು ಬಹಳ ಚುರುಕು ಹಾಗೂ ತಮಾಷೆಯ ಮನುಷ್ಯ. ನಿನ್ನಲ್ಲಿರುವ ಹಾಸ್ಯ ಪ್ರಜ್ಞೆಯನ್ನು ಮೆಚ್ಚಿ ನಾನು ನಿನಗೆ 'ವಿಕಟಕವಿ' ಎಂಬ ಬಿರುದನ್ನು ಕೊಡುತ್ತೇನೆ. 'ವಿಕಟಕವಿ' ಎಂಬುದೂ ಕೂಡ ತಮಾಷೆಯಾಗಿದೆಯಲ್ಲವೇ? 'ವಿಕಟಕವಿ' ಹಿಂದೆ–ಮುಂದೆ ಮಾಡಿ ಓದಿದರೂ ಅದೇ ಬರುತ್ತದೆ'' ಎಂದಳು.

ರಾಮನು 'ತಾಯಿ ಕಾಳೀಕಾದೇವಿ, ಅದರಿಂದ ನನಗೇನು ಪ್ರಯೋಜನ?' ಎಂದು ಕೇಳೀದನು ಆಗ ಕಾಳಿಮಾತೆಯು 'ರಾಮಾ, ನಾನು ನಿನಗೆ ಇನ್ನೊಂದು ವರವನ್ನು ಕೊಡುತ್ತೇನೆ. ಇಗೋ ನೋಡು ನನ್ನ ಕೈಗಳಲ್ಲಿ ಎರಡು ಬಟ್ಟಲುಗಳಿವೆ. ಬಲಗೈಯಲ್ಲಿ ಚಿನ್ನದ ಬಟ್ಟಲಿನಲ್ಲಿ ಜ್ಞಾನವೆಂಬ ಹಾಲಿದೆ. ಎಡಗೈಯಲ್ಲಿ ಬೆಳ್ಳಿಯ ಬಟ್ಟಲಿನಲ್ಲಿ ಹಣವೆಂಬ ಮೊಸರಿದೆ. ನಿನಗೆ ಯಾವುದು ಬೇಕೋ ಅದನ್ನು ತೆಗೆದುಕೋ' ಎಂದಳು.

ರಾಮನು ಮನಸ್ಸಿನಲ್ಲೇ ಯೋಚಿಸಿದನು. ಬರೀ ಒಂದೇ ಬಟ್ಟಲಿನಲ್ಲಿರುವುದನ್ನು ತೆಗೆದುಕೊಂಡರೆ ತನಗೆ ಪ್ರಯೋಜನವಾಗುವುದಿಲ್ಲ. ದೇವಿಯಲ್ಲಿರುವ ಎರಡೂ ಬಟ್ಟಲುಗಳನ್ನು ತೆಗೆದುಕೊಂಡರೆ ಒಳ್ಳೆಯದು. ಹೀಗೆ ಯೋಚಿಸುತ್ತಾ ರಾಮನು 'ತಾಯಿ ಕಾಳಿಕಾಮಾತೆ, ಅದರ ರುಚಿಯನ್ನು ನೋಡದೆ ನಾನು ಹೇಗೆ ತೆಗೆದುಕೊಳ್ಳಲಿ?' ಎಂದನು.

ಆಗ ಕಾಳಿಕಾದೇವಿ ತನ್ನ ಎರಡೂ ಕೈಗಳನ್ನು ಮುಂದೆ ಚಾಚಿ 'ಸರಿ ನೋಡು' ಎಂದಳು.

ಆಗ ರಾಮನು ಅವಳ ಕೈಯಲ್ಲಿದ್ದ ಎರಡೂ ಬಟ್ಟಲುಗಳನ್ನು ತೆಗೆದುಕೊಂಡು ಒಂದೇ ನಿಮಿಷದಲ್ಲಿ ಹಾಲು, ಮೊಸರನ್ನು ಕುಡಿದು ಬಿಟ್ಟನು. ರಾಮನು ತನಗೆ ಮೋಸ ಮಾಡಿದ್ದನ್ನು ನೋಡಿ ದೇವಿಗೆ ಕೋಪ ಬಂದಿತು.ಆದರೆ ರಾಮನು ವಿನಯದಿಂದ ದೇವಿಯಲ್ಲಿ 'ತಾಯಿ, ನನ್ನನ್ನು ಕ್ಷಮಿಸು. ಮನುಷ್ಯನಾದವನಿಗೆ ಬರೀ ಜ್ಞಾನವಿದ್ದರೆ ಯಾವುದೇ ಲಾಭವಿಲ್ಲ. ಅಲ್ಲದೇ ಬರೀ ಸಂಪತ್ತಿದ್ದರೂ ಉಪಯೋಗವಿಲ್ಲ. ಜ್ಞಾನ ಮತ್ತು ಸಂಪತ್ತು ಎರಡೂ ಇದ್ದರೆ ಒಳ್ಳೆಯದೆಂದು ನಾನು ಎರಡನ್ನೂ ತೆಗೆದುಕೊಂಡು ಬಿಟ್ಟೆ' ಎಂದನು.

ರಾಮನ ಬುದ್ಧಿವಂತಿಕೆಯನ್ನು ಮೆಚ್ಚಿ ಕಾಳಿಕಾದೇವಿಯು 'ರಾಮಾ, ನಿನ್ನ ಮಾತುಗಳನ್ನು ಮೆಚ್ಚಿಕೊಂಡೆ. ನಿನ್ನ ಬಿದ್ಧಿವಂತಿಕೆ, ವಿನೋದ, ಹಾಸ್ಯದ ಸ್ವಭಾವವು ನಿನಗೆ ಐಶ್ವರ್ಯವನ್ನು ತಂದುಕೊಟ್ಟ ಹಾಗೆಯೇ ನಿನಗೆ ಮಿತ್ರರನ್ನೂ ಶತ್ರುಗಳನ್ನೂ ಸೃಷ್ಟಿ ಮಾಡುತ್ತದೆ.ಅದಕ್ಕಾಗಿ ಇನ್ನು ಮುಂದೆ ನೀನು ಎಚ್ಚರಿಕೆಯಿಂದಿರು' ಎಂದು ನುಡಿದು ಅದೃಶ್ಯಳಾದಳು. ■